ಕ್ರ.ಸಂ.	ಜಿಲ್ಲೆಯ ಹೆಸರು	ಶಾಲೆಗಳ ಸಂಖ್ಯೆ
18.	ಉಡುಪಿ	06
19.	ಬೆಳಗಾಂ	ಇಲ್ಲ
20.	ಚಿಕ್ಕೋಡಿ	ಇಲ್ಲ
21.	ಬಿಜಾಪುರ	ಇಲ್ಲ
22.	ಬಾಗಲಕೋಟೆ	ಇಲ್ಲ
23.	ಧಾರವಾಡ	01
24.	ಗದಗ್	ಇಲ್ಲ
25.	ಹಾವೇರಿ	ಇಲ್ಲ
26.	ಉತ್ತರ ಕನ್ನಡ	04
27.	ಗುಲ್ಬರ್ಗಾ	ಇಲ್ಲ
28.	ಯಾದಗಿರಿ	ಇಲ್ಲ
29.	ಬಳ್ಳಾರಿ	07
30.	ರಾಯಚೂರು	ಇಲ್ಲ
31.	ಕೊಪ್ಪಳ	ಇಲ್ಲ
32.	ಬೀದರ್	ಇಲ್ಲ
	ಒಟ್ಟು	**153**

679 (636) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ನಗರ ಪ್ರದೇಶದಲ್ಲಿರುವ ರಸ್ತೆಗಳು ಡಾಂಬರೀಕರಣವಿಲ್ಲದೇ ಅವ್ಯವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗುರುವಾಯನಕೆರೆಯಿಂದ ಬೆಳ್ತಂಗಡಿ ಪೇಟೆಯ ಸೇತುವೆಯವರೆಗಿನ ನಗರ ವ್ಯಾಪ್ತಿಯ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಿ ದ್ವಿಮುಖ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

ಇ) ಅತೀ ಹೆಚ್ಚು ವಾಹನ ಸಂಚಾರ ದಟ್ಟಣೆಯಿರುವ ಈ ರಸ್ತೆಯನ್ನು ಕೂಡಲೇ ಕಾಂಕ್ರೀಟಿಕರಣಗೊಳಿಸಲು ಕ್ರಮ ಜರುಗಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ನಗರ ಪ್ರದೇಶದಲ್ಲಿರುವ ರಸ್ತೆಗಳು ಬೆಳ್ತಂಗಡಿ ನಗರಸಭಾ ವ್ಯಾಪ್ತಿಯಲ್ಲಿದ್ದು, ಲೋಕೋಪಯೋಗಿ ಇಲಾಖೆಯ ಕಾರ್ಯ ವ್ಯಾಪ್ತಿಗೆ ಬರುವುದಿಲ್ಲ.

ಆ) ಮೇಲೆ ತಿಳಿಸಿದಂತೆ, ಸದರಿ ರಸ್ತೆಯು ನಗರಸಭಾ ವ್ಯಾಪ್ತಿಯಲ್ಲಿ ಬರುವುದರಿಂದ, ಈ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಿ ದ್ವಿಮುಖ ರಸ್ತೆಯನ್ನಾಗಿ

ಮಾಡುವ ಯಾವುದೇ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯ ಮುಂದಿರುವುದಿಲ್ಲ.

ಇ) ಉಪ ಪ್ರಶ್ನೆ (ಆ)ರಲ್ಲಿನ ಉತ್ತರದಿಂದಾಗಿ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)ಯವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 636ಕ್ಕೆ ಪೂರಕ ಟಿಪ್ಪಣಿ

ಬೆಳ್ತಂಗಡಿ ನಗರ ಪ್ರದೇಶದಲ್ಲಿರುವ ರಸ್ತೆಗಳು ಬೆಳ್ತಂಗಡಿ ನಗರಸಭಾ ವ್ಯಾಪ್ತಿಗೆ ಬರುವುದಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಗುರುವಾಯನಕೆರೆಯಿಂದ ಬೆಳ್ತಂಗಡಿ ಪೇಟೆಯ ಸೇತುವೆ ರಸ್ತೆಯು ಕಡೂರು–ಕಾಂಇಂಗಾಡ್ ರಾಜ್ಯ ಹೆದ್ದಾರಿ (ನಂ. 64) ರಸ್ತೆಯಾಗಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈ ರಸ್ತೆಯ ಕಿಮೀ. 129.80 ರಿಂದ 133.60 ವರೆಗಿನ ಕ್ಯಾರೇಜ್‌ವೇ ಅಗಲವು 7.50 ಕಿಮೀ. ಇದ್ದು ಉಳಿದಂತೆ ಗುರುವಾಯನಕೆರೆ ಪೇಟೆ ಭಾಗ, ಮಸೀದಿ ಹತ್ತಿರ ಹಾಗೂ ಬೆಳ್ತಂಗಡ್ಡಿ ಸೇತುವೆಯ ಕೂಡು ರಸ್ತೆ ಭಾಗದಲ್ಲಿ 5.50 ಮೀ. ಅಗಲ ವಿರುತ್ತದೆ. ಈ ರಸ್ತೆಯನ್ನು ಕಿಮೀ. 124.80 ರಿಂದ 135.00 ವರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ನಿರ್ವಹಣೆ ಕಾಮಗಾರಿಯನ್ನು ಕೈಗೊಂಡು ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿಡಲಾಗಿದೆ. ಸದರಿ ರಸ್ತೆಯು ನಗರಸಭಾ ವ್ಯಾಪ್ತಿಯಲ್ಲಿ ಬರುವುದರಿಂದ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದಾಗಲೀ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದಾಗಲೀ ಕಾಂಕ್ರೀಟೀಕರಣಗೊಳಿಸಿ ದ್ವಿಮುಖ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ಇರುವುದಿಲ್ಲ. ಕಡೂರು ಬಂಟ್ವಾಳ ರಸ್ತೆಯನ್ನು ರಾಜ್ಯ ಹೆದ್ದಾರಿಯ ಮೂರು ವರ್ಷಗಳ ನಿರ್ವಹಣೆಯ ಯೋಜನೆಯ ಅಡಿಯಲ್ಲಿ ಜೂನ್ 2001ರಲ್ಲಿ ನಿರ್ವಹಣೆ ಪ್ರಾರಂಭಿಸಿ ಜೂನ್ 2004ರಲ್ಲಿ ಮುಕ್ತಾಯಗೊಳಿಸಲಾಗಿದೆ.

8 (29) : ಶ್ರೀ ಆರ್. ಆಶೋಕ್ (ಉತ್ತರಹಳ್ಳಿ) ಶ್ರೀ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರತಿ ವರ್ಷ ಬಡತನ ರೇಖೆಯ ಕೆಳಗಿರುವ ಮಹಿಳೆಯರಿಗೆ ಉಚಿತ ಸೀರೆ ಮತ್ತು ಉಚಿತ ಬೆಡ್‌ಶೀಟ್ ನೀಡಲು ಸರ್ಕಾರ ತೀರ್ಮಾನಿಸಿದೆಯೇ;

ಆ) ಈ ಯೋಜನೆ ಎಂದಿನಿಂದ ಜಾರಿಗೆ ಬರಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ.

412(509) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯು 2004ರ ವರೆಗೆ ಹೊಂದಿರತಕ್ಕಂತಹ ಒಟ್ಟು ಸಾಲ ಮತ್ತು ಬಡ್ಡಿ ಎಷ್ಟು;